**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 30.06.2021.**

**1] ತಾಳಿಕೋಟ ಪೊಲೀಸ ಠಾಣೆ ಗುನ್ನೆ ನಂ: 115/2021 ಕಲಂ: 279. 337. 338. 304(ಎ) ಐಪಿಸಿ**

ದಿನಾಂಕ 29.06.2021 ರಂದು 07.00 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಶರಣಪ್ಪ ಸಂಗಪ್ಪ ಸಿರಸಿಗಿ. ಸಾ॥ ಉಮ್ಮರಗಿ ತಾ॥ ಅಫಜಲಪೂರ. ಮೋಟರ ಸೈಕಲ್ ನಂ– ಕೆಎ–48. ಕ್ಯೂ–7247 ನೇದರ ಚಾಲಕ. ಈತನು ತಾನು ನಡೆಸುತ್ತಿದ್ದ ಮೋಟರ ಸೈಕಲ್ ನೇದರ ಮೇಲೆ ತನ್ನ ಅಣ್ಣನಾದ ಶಿವಪುತ್ರ ಸಂಗಪ್ಪ ಸಿರಸಿಗಿ. ವಯಾ– 38 ವರ್ಷ. ಉದ್ಯೋಗ ಗೌಂಡಿಕೆಲಸ. ಜಾತಿ– ಹಿಂದೂ ಹೊಲೇರ ಸಾ॥ ಉಮ್ಮರಗಿ ತಾ॥ ಅಫಜಲಪೂರ. ಇವನಿಗೆ ಹಿಂದೆ ಕೂಡಿಸಿಕೊಂಡು ತಮ್ಮೂರಿಂದ ಯಡ್ರಾಮಿ. ತಾಳಿಕೋಟಿ ಮಾರ್ಗವಾಗಿ ಬೆಂಗಳೂರಕ್ಕೆ ದುಡಿಯಲು ಹೋಗುವಾಗ ಹೋಕ್ರಾಣಿ ದಾಟಿ ಮುದ್ದೇಬಿಹಾಳ ಕಡೆಗೆ ಹೋಗುವಾಗ 1 ಕಿ.ಮಿ ಅಂತರದಲ್ಲಿ ಮೋಟರ ಸೈಕಲ್‌ನ್ನು ಜೋರಾಗಿ ಅಜಾಗೂರುಕತೆಯಿಂದ ಮಾನವಿಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡಿಸಿಕೊಂಡು ಹೋಗಿ ರಸ್ತೆ ಪಕ್ಕದಲ್ಲಿ ಇರುವ ಹೊಲದಲ್ಲಿ ಕೆಡವಿ ಶಿವಪುತ್ರ ಸಂಗಪ್ಪ ಸಿರಸಿಗಿ. ಇವನಿಗೆ ಸಾದಾ ವ. ಬಾರಿ ಗಾಯ ಒಳಪೆಟ್ಟು ಪಡಿಸಿ. ತಾನು ಸಹ ಸಾದಾ ಸ್ವರೂಪದ ಗಾಯ ಒಳಪೆಟ್ಟುಹೊಂದಿದ್ದು. ದುಃಖಾಪತನಾದ ಶಿವಪುತ್ರ ಇವನಿಗೆ ತಾಲೂಕ ಸರಕಾರಿ ಆಸ್ಪತ್ರೆ ಮುದ್ದೇಬಿಹಾಳದಲ್ಲಿ ಉಪಚಾರ ಮಾಡಿಸಿ ಹೆಚ್ಚಿನ ಉಪಚಾರಕ್ಕೆ ವಿಜಯಪುರಕ್ಕೆ 108 ಗಾಡಿಯಲ್ಲಿ ಪಿರ್ಯಾದಿ ಮತ್ತು ಸಾಕ್ಷಿದಾರ ಜನರು ಕೂಡಿ ಕರೆದುಕೊಂಡು ಹೋಗುವಾಗ ಮುದ್ದೇಬಿಹಾಳದಲ್ಲಿ ಇರುವ ಬೋಸಲೆ ಆಯಿಲ್ ಮಿಲ್ ಹತ್ತಿರ ಶಿವಪುತ್ರ ಇವನು ಮೃತನಾಗಿದ್ದು ಸದರಿ ಮೃತನ ಶವವನ್ನು ತಾಲೂಕ ಸಾರ್ವಜನಿಕ ಆಸ್ಪತ್ರೆ ಮುದ್ದೇಬಿಹಾಳದಲ್ಲಿ ಹಾಕಿ ಮೃತನ ಸಂಬಂದಿಕರಿಗೆ ಅಪಘಾತದ ಸಂಗತಿ ತಿಳಿಸಿದಾಗ. ಮೃತನ ಸಂಬಂದಿಕರು ಬಂದು ನೋಡಿದ ನಂತರ ಅವರಿಗೆ ತಿಳಿಸಿ ಪಿರ್ಯಾದಿದಾರನು ಪಿರ್ಯಾದಿಯನ್ನು ನೀಡಲು ತಡವಾಗಿದ್ದು ಇರುತ್ತದೆ ಈ ಬಗ್ಗೆ ಪ್ರಭು ಧರ್ಮಣ್ಣ ಬಡಿಗೇರಿ. ಸಾ: ಮುದ್ದೇಬಿಹಾಳ ಆಶ್ರಯಕಾಲನಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.06.2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 98/2021 ಕಲಂ: ಮಹಿಳೆ ಮತ್ತು ಮಗು ಕಾಣೆ**

ದಿನಾಂಕ 22.06.2021 ರಂದು 16:00 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ 1] ರೇಷ್ಮಾ ಗಂಡ ಬಾಳು ರಾಠೋಡ @ ಲಮಾಣಿ ವಯಾ–28 ವರ್ಷ 2] ಸಮರ್ಥ ತಂದೆ ಬಾಳು ರಾಠೋಡ @ ಲಮಾಣಿ ವಯಾ–05 ವರ್ಷ ಸಾ: ಇಬ್ಬರೂ ಯತ್ನಾಳ ತಾಂಡಾ ನಂ 01 ಇವಳು ನನ್ನ ಮಗ ಸಮರ್ಥ ವಯಾ–5 ವರ್ಷ ಈತನಿಗೆ ಕರೆದುಕೊಂಡು ನಮ್ಮ ಜಮೀನದ ಮನೆಯಿಂದ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ ಅವಳಿಗೆ ಹಾಗೂ ಮಗ ಸಮರ್ಥ ಈತನಿಗೆ ಪತ್ತೆ ಮಾಡಿಕೊಡಲು ನನ್ನದು ಪಿರ್ಯಾದಿ ಇರುತ್ತದೆ. ಈ ಬಗ್ಗೆ ಬಾಳು ತಂದೆ ಲಕ್ಷ್ಮಣ ರಾಠೋಡ @ ಲಮಾಣಿ ವಯಾ–35 ವರ್ಷ ಸಾ॥ ಯತ್ನಾಳ ತಾಂಡಾ ನಂ–01 ತಾ॥ ತಿಕೋಟಾ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.06,2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 91/2021 ಕಲಂ: 15 (ಎ), 32 (3) ಕೆ.ಇ. ಆ್ಯಕ್ಟ**

ದಿನಾಂಕ 29.06.2021 ರಂದು 07.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಸಚೀನ್ ತಂ: ಶ್ರೀಶೈಲ ಬಿರಾದಾರ. ಸಾ॥ ದೇವಾಪೂರ ತಾ॥ ಬಬಲೇಶ್ವರ ಈತನು ದೇವಾಪೂರ ಗ್ರಾಮದ ಬಸ್ಸನಿಲ್ದಾಣದ ಹತ್ತಿರ ಆರೋಪಿತನ ತಮ್ಮ ಬಾಬತ್ತ ಪಾನಶಾಪದಲ್ಲಿ, ಸರಕಾರದಿಂದ ಯಾವುದೇ ಅನುಮತಿ ವ ಪರವಾನಿಗೆ ಇಲ್ಲದೇ ಅನಧಿಕೃತವಾಗಿ ಜನರಿಗೆ ಸರಾಯಿ ಕುಡಿಯಲು ಅವಕಾಶ ಮಾಡಿಕೊಟ್ಟಾಗ 90 ಎಮ್.ಎಲ್‌ದ ಅಳತೆಯ ಓಲ್ಡ ಟವರೆನ ವಿಸ್ಕಿ ಅಂತಾ ಲೇಬಲ್ ಇದ್ದ 03 ಖಾಲಿ ಸರಾಯಿ ಟೆಟ್ರಾ ಪಾಕೀಟ್‌ಗಳು ಕಿಮ್ಮತ್ತು 00=00 ಸಿಕ್ಕಿದ್ದು, ಅಲ್ಲದೆ ಕುಡಿಯಲು ಬಳಿಸಿದ 03 ಪ್ಲಾಸ್ಟಿಕ್ ಗ್ಲಾಸಗಳು ಕಿಮ್ಮತ್ತು 00=00 ಸಿಕ್ಕಿದ್ದು ಅದೆ. ಈ ಬಗ್ಗೆ ಸ:ತ: ಸೋಮನಗೌಡ.ಬಿ.ಗೌಡ್ರ ಪಿ.ಎಸ್.ಐ ಬಬಲೇಶ್ವರ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.06,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 105/2021 ಕಲಂ: ಮಹಿಳೆ ಮತ್ತು ಮಗು ಕಾಣೆ**

ದಿನಾಂಕ 13.02.2021 ರಂದು 13:00 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಆರತಿ @ ಭಾಗವ್ವ ಗಂಡ ಪುಂಡಲಿಕ ಗೂಡ್ಲ, ವಯಾ–30 ವರ್ಷ, ಉದ್ಯೋಗ–ಮನೆಗೆಲಸ ಸಾ॥ ಹಂಜಗಿ, ತಾ॥ ಇಂಡಿ, ಹಾ॥ವ॥ ಜಾಲವಾದ ಮಗನಾದ ಹಣಮಂತ್ರಾಯ ತಂದೆ ಪುಂಡಲಿಕ ಗೂಡ್ಲ, ವಯಾ–03 ವರ್ಷ, ಸಾ॥ ಹಂಜಗಿ, ತಾ॥ ಇಂಡಿ, ಹಾ॥ವ॥ ಜಾಲವಾದ ಇವಳು ಇವಳು ತನ್ನೊಂದಿಗೆ ತನ್ನ ಮಗ ಹಣಮಂತ್ರಾಯ ವರ್ಷ, ಸಾ॥ ಹಂಜಗಿ, ತಾ॥ ಇಂಡಿ, ಹಾ॥ವ॥ ಜಾಲವಾದ ಈತನಿಗೆ ಕರೆದುಕೊಂಡು, ಸಂಡಾಸಕ್ಕೆ ಹೋಗಿ ಬರುತ್ತೇನೆ ಅಂತಾ ಮನೆಯಲ್ಲಿ ಹೇಳಿ ಮನೆಯಿಂದ ಹೋದವಳು, ಇಲ್ಲಿಯವರೆಗೂ ತನ್ನ ಮಗನಿಗೆ ಕರೆದುಕೊಂಡು ಪರ್ತ ಮನೆಗೆ ಬಾರದೇ ಕಾಣೆಯಾಗಿರುತ್ತಾಳೆ, ಕಾಣೆಯಾದ ನನ್ನ ಮಗಳಿಗೆ ಮತ್ತು ಮೊಮ್ಮಗನಿಗೆ ತಪಾಸ ಮಾಡಿಕೊಡಬೇಕು ಅಂತಾ ವಗ್ಯೆರೆ ಫಿರ್ಯಾದಿದಾರನ ಫಿರ್ಯಾದಿಯಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಲಗಮಣ್ಣ ತಂದೆ ಗುರುಪ್ಪ ಸೊಲ್ಲಾಪೂರ, ವಯಾ: 65 ವರ್ಷ, ಸಾ: ಜಾಲವಾದ, ತಾ: ದೇವರ ಹಿಪ್ಪರಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.06,2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.